ಓ ಎಸ್ ನಂ. 244/2021

ಡಿ ಡಬ್ಲ್ಯು 1

ದಿನಾಂಕ 24/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ ಎಸ್ ಎನ್ ಎ ವಕೀಲರಿಂದಃ

ನಾನು ಡಿಗ್ರಿವರೆಗೆ ವ್ಯಾಸಂಗ ಮಾಡಿರುತ್ತೇನೆ. ಪ್ರಸ್ತುತ ದಾವೆಗೆ ಸಂಬಂದಪಟ್ಟಂತೆ ನನ್ನ ಪರವಾಗಿ ತಕರಾರು ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ ಎಂದರೆ ಸರಿ. ಸದರಿ ತಕರಾರಿನಲ್ಲಿ ಬರೆದಿರುವ ವಿಚಾರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ಈ ಹಿಂದಿನ ಸಾಕ್ಷ್ಯ ವಿಚಾರಣೆಯ ಸಮಯದಲ್ಲಿ ಮೂಲ ವಿಭಾಗ ಪತ್ರವನ್ನು ಬ್ಯಾಂಕಿನಲ್ಲಿ ಸಾಲಕ್ಕಾಗಿ ಆಧಾರ ಮಾಡಿರುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿ. ಬ್ಯಾಂಕಿನ ನಿಯಮಗಳ ಬಗ್ಗೆ ನನಗೆ ತಿಳಿದಿದೆಯಾ ಎಂದರೆ ಸಾಕ್ಷಿ ಎಷ್ಟು ಅವಶ್ಯಕತೆ ಇದೆಯೋ ಅಷ್ಟು ಮಾತ್ರ ತಿಳಿದಿದೆ ಎಂದು ನುಡಿಯುತ್ತಾರೆ. ಬ್ಯಾಂಕಿಗೆ ನೊಂದಣಿಯಾಗಿರುವ ಮೂಲ ವಿಭಾಗ ಪತ್ರವನ್ನು ಆಧಾರ ಮಾಡಿದರೆ ಮಾತ್ರ ಸಾಲವನ್ನು ಮಂಜೂರು ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಕರಾರಿನಲ್ಲಿ ದಿನಾಂಕ 22/04/1998 ರಂದು ನನ್ನ ಮತ್ತು ನನ್ನ ಸಹೋದರರ ನಡುವೆ ವಿಭಾಗ ಆಗಿದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಿಡಿ-16 ರಲ್ಲಿ ದಿನಾಂಕ 15/04/1998 ಎಂದು ನಮೂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಂ

ಆರ್ ಆದೇಶ ದಿನಾಂಕ 22/04/1998 ರಂದು ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ದಿನಾಂಕ 22/04/1998 ರಂದು ಯಾವುದಾದರೂ ವಿಭಾಗ ಪತ್ರವಾಗಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನಿಡಿ-16 ರ ದಾಖಲೆಯ ಮೇಲಿನ ಕಲಂಗಳನ್ನು ಕಪ್ಪು ಶಾಹಿ ಬಳಸಲಾಗಿದ್ದು, ಕೆಳಗಿನ ಕಲಂಗಳಲ್ಲಿ ನೀಲಿ ಶಾಹಿ ಬಳಸಲಾಗಿದೆ ಎಂದರೆ ಸರಿ. ನಿಡಿ-16 ರ ವಿಭಾಗ ಪತ್ರ ಯಾರ ಮನೆಯಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆ ಈಶ್ವರಪ್ಪರವರ ಮನೆಯಲ್ಲಿ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿ 4 ಜನ ಸಾಕ್ಷಿದಾರರು ಮತ್ತು ನಾನು, ನನ್ನ ತಂದೆ ಈಶ್ವರಪ್ಪ, ನನ್ನ ಸಹೋದರರಾದ ವಿರೂಪಾಕ್ಷಪ್ಪ ಮತ್ತು ಸೋಮಶೇಖರಪ್ಪರವರು ಇದ್ದೇವು ಎಂದು ನುಡಿಯುತ್ತಾರೆ. ಸಾಕ್ಷಿದಾರರು ಯಾವ ಗ್ರಾಮದವರು ಎಂದರೆ ಸಾಕ್ಷಿ ನಮ್ಮ ಗ್ರಾಮವಾದ ಚೆನ್ನಾಪುರದವರೇ ಎಂದು ನುಡಿಯುತ್ತಾರೆ. ಸಾಕ್ಷಿದಾರರ ಹೆಸರು ಗೊತ್ತ ಎಂದರೆ ಸಾಕ್ಷಿ ಹೌದು ಅವರ ಹೆಸರು ಸಿ ಬಿ ಈಶ್ವರಪ್ಪ, ಸಿ ಎಂ ಬಕ್ಕಪ್ಪ, ಡಿ ಗೋವಿಂದಪ್ಪ ಮತ್ತು ಸಿ ಹೆಚ್ ಗಿರೀಶಪ್ಪ ಎಂದು ನುಡಿಯುತ್ತಾರೆ. ಅವರ ಪೈಕಿ ಗಿರೀಶಪ್ಪ ಮತ್ತು ಈಶ್ವರಪ್ಪರವರು ಮಾತ್ರ ಬದುಕಿದ್ದಾರೆ. ಸದರಿ ಪತ್ರವನ್ನು ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿ ಮಲ್ಲೇನಹಳ್ಳಿಯ ಬಸಪ್ಪ ಎನ್ನುವವರು ಬರೆದಿರುತ್ತಾರೆ, ಆದರೆ ಅವರು ಮೃತ ಪಟ್ಟಿರುತ್ತಾರೆ.

ವಾದಿ ಪರ ವಕೀಲರು 7 ನೇ ಪ್ರತಿವಾದಿಗೆ ದಾಖಲೆಗಳನ್ನು ಹಾಜರುಪಡಿಸುವಂತೆ ದಿನಾಂಕ 10/09/2025 ರಂದು ನೋಟೀಸು ಜಾರಿಗೊಳಿಸಿದ್ದು, ಅದರಂತೆ 7 ನೇ ಪ್ರತಿವಾದಿ ಹಾಜರುಪಡಿಸಿರುವಂತಹ ದಾಖಲೆ ಹಾಗೂ ನಾನು ಹಾಜರುಪಡಿಸಿರುವ ನಿಡಿ-16 ರ ದಾಖಲೆ ಎರಡೂ ಸಹ ಒಂದೇ ಆಗಿರುತ್ತದೆ ಎಂದರೆ ಸರಿ. ನಿಡಿ-16 ರಂತೆ ನಾನು ಹಾಜರುಪಡಿಸಿರುವ ದಾಖಲೆಯ ಕ್ರಮಸಂಖ್ಯೆ 4 ರಲ್ಲಿ ಸರ್ವೆ ನಂ.16/5 ಪಿ ಎಂದು ನಮೂದಿದ್ದು, 7 ನೇ ಪ್ರತಿವಾದಿ ಹಾಜರುಪಡಿಸಿರುವ ದಾಖಲೆಯ ಕ್ರಮಸಂಖ್ಯೆ 4 ರಲ್ಲಿ ಸರ್ವೆ ನಂ.20/9 ಪಿ ಎಂದು ನಮೂದಿರುತ್ತದೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗವಾಗದೆ ಇದ್ದರೂ ಸಹ ನಿಡಿ-16 ರ ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರಂಭಿಕ ಹಂತದಲ್ಲಿ ದಾಖಲೆಗಳನ್ನು ಹಾಜರುಪಡಿಸದೆ ಕೊನೆಯ ಹಂತದಲ್ಲಿ ವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 15/04/1998 ರಲ್ಲಿ ಅಥವಾ 22/04/1998 ರಲ್ಲಾಗಲಿ ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸಾಕ್ಷಿದಾರರು ಎಲ್ಲಾರೂ ಷರೀಕ್ಕಾಗಿ ನಿಡಿ-16 ರ ದಾಖಲೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಹೆಂಡತಿಯಾದ ಸಿ ಎನ್ ಅನಿತಾರವರಿಗೆ 2002 ರಲ್ಲಿ ಸರ್ಕಾರಿ ನೌಕರಿ ಸಿಕ್ಕಿರುತ್ತದೆ. ದಾವಾ ಐಟಂ ನಂ.11 ರ ಸರ್ವೆ

ನಂ.4/1 ರ 21 ಗುಂಟೆ ಜಮೀನನ್ನು ನನ್ನ ತಂದೆ ಯಾವಾಗ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ನಾನು ಸದರಿ ಜಮೀನನ್ನು 2016 ರಲ್ಲಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಬೇರೆ ಜಮೀನಿನಿಂದ ಬಂದ ಆದಾಯದಿಂದ ದಾವಾ ಐಟಂ ನಂ.ಶ 11 ರ ಸ್ವತ್ತನ್ನು ನನ್ನ ಹೆಸರಿಗೆ ಖರೀದಿಸಿದ್ದು, ಸದರಿ ಜಮೀನನ್ನು ಖರೀದಿಸಲು ನನ್ನ ಹೆಂಡತಿ ಯಾವುದೇ ರೀತಿಯ ಹಣವನ್ನು ತೊಡಗಿಸಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಮೋಸ ಮಾಡುವ ಸಲುವಾಗಿ ನಿಡಿ-16 ರಿಂದ 18 ರ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-8 ಮತ್ತು 9 ರ ಕ್ರಯಪತ್ರಗಳಲ್ಲಿ ವಾದಿ ಶಾರದರವರ ಸಹಿಯಾಗಲಿ ಅಥವಾ 3 ನೇ ಪ್ರತಿವಾದಿ ಸಿ ಇ ರತ್ನಮ್ಮರವರಾಗಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿ ಮತ್ತು 3 ನೇ ಪ್ರತಿವಾದಿಗೂ ಸಹ ಸಮಾನವಾದ ಹಿಸ್ಸೆ ಮತ್ತು ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಸಹೋದರಿಯರಿಗೆ ಮೋಸ ಮಾಡುವ ಸಲುವಾಗಿ 7 ನೇ ಪ್ರತಿವಾದಿ ಹೆಸರಿಗೆ ನಾನು, ನನ್ನ ತಂದೆ, ನನ್ನ ಸಹೋದರರು ಸೇರಿ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-8 ಮತ್ತು 9 ರ ಕ್ರಯಪತ್ರಗಳು ವಾದಿಗಾಗಲಿ 3 ನೇ ಪ್ರತಿವಾದಿಗಾಗಲಿ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 7 ನೇ ಪ್ರತಿವಾದಿ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ</u>**

ನಮ್ಮ ಕುಟುಂಬದಲ್ಲಿ ನಿಡಿ-16 ರಂತೆ ವಿಭಾಗವಾಗಿದೆ ಎಂದರೆ ಸರಿ. ಆ ವಿಭಾಗಪತ್ರದಲ್ಲಿರುವ ಆಸ್ತಿಗಳ ಪೈಕಿ ದಾವಾ ಐಟಂ ನಂ.1 ರ ಒಟ್ಟು 3 ಎಕರೆ ಪೈಕಿ 2 ಪ್ರತ್ಯೇಕ ಷೆಡ್ಯೂಲ್ ಗಳಲ್ಲಿ ತಲಾ ಒಂದೊಂದು ಎಕರೆ ಸ್ವತ್ತನ್ನು ದಿನಾಂಕ 18/05/2002 ರಂದು ವಿರೂಪಾಕ್ಷಪ್ಪ, ಸೋಮಶೇಖರಪ್ಪ ಮತ್ತು ನಾನು 7 ನೇ ಪ್ರತಿವಾದಿ ಹೆಸರಿಗೆ ನಿಡಿ-8 ರಂತೆ ಕ್ರಯಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ನನ್ನ ಸಹಿ ಇದ್ದು, ಭಾವಚಿತ್ರ ಸಹ ಇರುತ್ತದೆ ಎಂದರೆ ಸರಿ. ಅದೇರೀತಿ ದಿನಾಂಕ 29/01/2004 ರಂದು ದಾವಾ ಐಟಂ ನಂ.1 ರ ಒಟ್ಟು 3 ಎಕರೆ ಪೈಕಿ ಉಳಿದ 1 ಎಕರೆ ಸ್ವತ್ತನ್ನು ವಿರೂಪಾಕ್ಷಪ್ಪ, ಸೋಮಶೇಖರಪ್ಪ ಮತ್ತು ನಾನು 7 ನೇ ಪ್ರತಿವಾದಿ ಹೆಸರಿಗೆ ನಿಡಿ-9 ರಂತೆ ಕ್ರಯಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ. ದಾವಾ ಐಟಂ ನಂ.1 ರ ಒಟ್ಟು 3 ಎಕರೆ ಆಸ್ತಿಯನ್ನು ನಮ್ಮ ಕುಟುಂಬದ ದರ್ದಿಗಾಗಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.